**ಸಾಕ್ಷಿಯನ್ನು ದಿ:14.10.2022 ರಂದು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

(ಕಳೆದ ಬಾರಿ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿದಾರರಿಗೆ ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ಮುದ್ದೆಮಾಲುಗಳನ್ನು ತೋರಿಸಿರುವುದಿಲ್ಲ. ಅವುಗಳನ್ನು ತೋರಿಸಲು ಮುಂದುವರಿದ ಮುಖ್ಯ ವಿಚಾರಣೆಗೆ ವಿಶೇಷ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು).

**ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ:**

11. ಈಗ ತೋರಿಸಿದ ಮು.ಮಾ-1 ರಿಂದ 3 ಚಾಕುಗಳು ಹಾಗೂ ಮು.ಮಾ-4 ರಿಂದ 8 ದೊಣ್ಣೆಗಳನ್ನು ನನಗೆ ಗುರುತಿಸಲು ಆಗುವುದಿಲ್ಲ. ಈಗ ಘಟನೆಯಾಗಿ 12 ವರ್ಷಗಳಾದ್ದರಿಂದ ಅವುಗಳನ್ನು ಗುರುತಿಸಲು ನನಗೆ ಆಗುವುದಿಲ್ಲ.

**ಪಾಟೀ ಸವಾಲು: 5 ಮತ್ತು 6 ನೇ ಆರೋಪಿತರ ಪರ ಶ್ರೀ ಎಸ್ ಎಸ್ ವಕೀಲರಿಂದ:**

12. ಪ್ರಾಸಾ-4 ಈತನ ಅಕ್ಕ ಗುರಮ್ಮ ನನ್ನ ಹೆಂಡತಿ. ಈಗ ಒಂದು ತಿಂಗಳ ಹಿಂದೆ ಪ್ರಾಸಾ-4 ಸುಮಾರು ಒಂದು ತಿಂಗಳವರೆಗೆ ಜೈಲಿನಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಚೂಡಮ್ಮ ಇವರು ನಮ್ಮ ಊರಿನವರು. ಸದರಿ ಚೂಡಮ್ಮ ದಿ:15.06.2022 ರಂದು ನನ್ನ ಮತ್ತು ಇತರರ ಮೇಲೆ ದೇವನಹಳ್ಳಿ ಪೋಲಿಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 70/22 ದಾಖಲಿಸಿದ್ದಾರೆ ಎಂದರೆ ಗೊತ್ತಿಲ್ಲ. 2015 ನೇ ಇಸವಿಯಲ್ಲಿ 6 ನೇ ಆರೋಪಿ ಮತ್ತು ಇತರರ ಮೇಲೆ ನಾನು ದೇವನಹಳ್ಳಿ ನ್ಯಾಯಾಲಯದಲ್ಲಿ ಒಂದು ಸಿವಿಲ್ ದಾವೆ ದಾಖಲಿಸಿದ್ದೇನೆ ಎಂದರೆ ಗೊತ್ತಿಲ್ಲ. ಸಾಕ್ಷಿದಾರರಿಗೆ ಅಸಲುದಾವಾ ಪ್ರತಿಯ ದೃಡೀಕೃತ ನಕಲನ್ನು ತೋರಿಸಿದಾಗ ಅದರಲ್ಲಿರುವ ತಮ್ಮ ಸಹಿಯನ್ನು ಒಪ್ಪುತ್ತಾರೆ. ಸದರಿ ದಾಖಲೆಯನ್ನು ನಿಡಿ-37 ಎಂದು ಗುರ್ತಿಸಲಾಯಿತು. ಆಸ್ತಿ ವಿಚಾರವಾಗಿ ಮೊದಲಿನಿಂದಲೂ ನಮಗೂ ಮತ್ತು 6 ನೇ ಆರೋಪಿಯ ಕುಟುಂಬಕ್ಕೆ ಜಿದ್ದು ಇದೆ ಎಂದರೆ ಸರಿ.

13. ಪ್ರಾಸಾ-4 ಇವರ ಮನೆ, ನನ್ನ ಮನೆ ಇವು ತಿಂಡ್ಲು ಕಡೆ ರಸ್ತೆಗೆ ಇವೆ ಎಂದರೆ ಸರಿ. ನಮ್ಮ ಊರಿನಿಂದ ತಿಂಡ್ಲು ಕಡೆಗೆ ಹೋಗುವ ರಸ್ತೆಗೆ ಸ್ವಲ್ಪ ದೂರ ಹೋಗಿ ಬಲಕ್ಕೆ ತಿರುಗಿ ಮುಂದೆ ಹೋದರೆ ಎಡಕ್ಕೆ ನನ್ನ ಮನೆ ಇದೆ ಎಂದರೆ ಸರಿ. ನನ್ನ ಮತ್ತು ಪ್ರಾಸಾ-4 ಇವರ ಮನೆಯ ಮಧ್ಯೆ ಎಂಟು ಮನೆಗಳಿವೆ ಎಂದರೆ ಸರಿ. ನಾನು

ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ ಎಂದರೆ ಸರಿ. ನನಗೆ ಮಕ್ಕಳಿಲ್ಲ. ಪ್ರಾಸಾ-2 ಈತನ ಮಗನನ್ನು ನಾನು ಸಾಕಿಕೊಂಡಿದ್ದೇನೆ ಎಂದರೆ ಸರಿ. ಗಲಾಟೆ ಆದ ಸಮಯದಲ್ಲಿ ಊರಲ್ಲಿ ನನಗೆ ಸ್ವಂತ ಜಮೀನು ಇರಲಿಲ್ಲ ಎಂದರೆ ಸರಿ. ನಾನು ಕೂಲಿ ಕೆಲಸಕ್ಕೆ ಬೆಳಗ್ಗೆ 9 ಘಂಟೆಗೆ ಹೋದರೆ ಸಂಜೆ 5 ಘಂಟೆಗೆ ವಾಪಸ್ಸು ಬರುತ್ತೇನೆ. ನನ್ನ ಹೆಂಡತಿ ಸಹ ಯಾರಾದರೂ ಕೂಲಿ ಕೆಲಸಕ್ಕೆ ಕರೆದರೆ ನನ್ನೊಂದಿಗೆ ಬರುತ್ತಾರೆ ಎಂದರೆ ಸರಿ. ಗಲಾಟೆ ಆದಾಗ ಪ್ರಾಸಾ-2 ಈತನ ಮಗ ಗುರುರಾಜ ಊರಲ್ಲಿ ಇರಲಿಲ್ಲ. ಆತ ಆಗ ಯಲಹಂಕದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ.

14. ಘಟನೆಯ ದಿನ ಬೆಳಗ್ಗೆ 9 ಘಂಟೆಗೆ ನಾನು ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ಆ ರೀತಿ ನಾನು ಆಸ್ಪತ್ರೆಗೆ ಹೋದ ಮೇಲೆ ಮಧ್ಯಾಹ್ನ 3-3.30 ರವರೆಗೆ ಅಲ್ಲೇ ಇದ್ದೆ. ನಾನು ಆಸ್ಪತ್ರೆಯಲ್ಲಿದ್ದಾಗ ಪಿಎಸ್ಐ, ಸಿಪಿಐರವರು ಆಸ್ಪತ್ರೆಗೆ ಬಂದಿದ್ದರು ಎಂದರೆ ಸಾಕ್ಷಿದಾರರು ನಾನು ಊರಲ್ಲೇ ಉಳಿದೆ ಆಸ್ಪತ್ರೆಗೆ ಹೋಗಿಲ್ಲ ಆದ್ದರಿಂದ ಅಲ್ಲಿ ಪೋಲಿಸರು ಬಂದ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಘಟನೆಯ ದಿನ ಗಲಾಟೆ ಆದ ಮೇಲೆ ನಾನು ದೇವನಹಳ್ಳಿ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿ. ನಂತರ ನಾನು ಮಧ್ಯಾಹ್ನ 3.30 ರವರೆಗೂ ಅಲ್ಲಿಯೇ ಇದ್ದೆ ಎಂದರೆ ಸರಿ. ವಿಶ್ವನಾಥಪುರ ಪೋಲಿಸ್ ಠಾಣೆಯನ್ನು ನಾನು ನೋಡಿದ್ದೇನೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ವಿಶ್ವನಾಥಪುರ ಪೋಲಿಸರು ಬಂದಿದ್ದರು ಎಂದರೆ ಸರಿ. ಪೋಲಿಸರನ್ನು ನೋಡಿದ ಮೇಲೆ ಅವರಿಗೆ ಘಟನೆಯ ಬಗ್ಗೆ ಹೇಳಬೇಕೆಂಬ ಆತುರ ನನಗೆ ಇತ್ತು ಎಂದರೆ ಸರಿ. ಆಸ್ಪತ್ರೆಯಲ್ಲಿ ಮೃತರನ್ನು ಮತ್ತು ಗಾಯಾಳುಗಳನ್ನು ನೋಡಿದೆ ಎಂದರೆ ಸರಿ. ಆಗ ಪೋಲಿಸರು ನನ್ನನ್ನು ಘಟನೆಯ ಬಗ್ಗೆ ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ.

15. ಮೂರು ಜನ ಮೃತರನ್ನು ಆಂಬ್ಯುಲೆನ್ಸ್ ನಲ್ಲಿ ಹಾಕಿಕೊಂಡು ವಾಪಸ್ಸು ನಾನು ಊರಿಗೆ ಬಂದೆ. ಆಗ ಪೋಲಿಸರು ಸಹ ಊರಿಗೆ ಬಂದಿದ್ದರು. ಶವಗಳನ್ನು ತೆಗೆದುಕೊಂಡು ಹೋದ ದಿನವೇ ಮಣ್ಣು ಮಾಡಿದೆವು. ಮಣ್ಣು ಮಾಡಿದ ಮರುದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದರಾ ಎಂದರೆ ಸಾಕ್ಷಿದಾರರು ನಾನು ತಿಂಡ್ಲು

ಗ್ರಾಮಕ್ಕೆ ಹೋಗಿದ್ದರಿಂದ ಗೊತ್ತಿಲ್ಲ ಎನ್ನುತ್ತಾರೆ. ತಿಂಡ್ಲುವಿನಿಂದ ವಾಪಸ್ಸು 11 ಘಂಟೆಗೆ ಊರಿಗೆ ಬಂದೆ. ಆ ದಿನ ಪೋಲಿಸರು ನಮ್ಮ ಊರಿಗೆ ಬಂದಿಲ್ಲ.

16. ಗಲಾಟೆ ವೇಳೆಯಲ್ಲಿ ಪ್ರಾಸಾ-4 ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಪ್ರಾಸಾ-4 ಈತನಿಗೆ 1 ನೇ ಆರೋಪಿಯೊಂದಿಗೆ ಏನು ವ್ಯವಹಾರ ಇದೆ ಎಂದು ನಿಮಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಬಿಟ್ಟು ಹೋಗಿದ್ದನೆಂದು ಹೇಳಿದ ಮೋಟಾರ್ ಸೈಕಲ್ ಮತ್ತು ಮೊಬೈಲ್ ಫೋನ್ ಅನ್ನು ಪೋಲಸರಿಗೆ ನಾನು ತೋರಿಸಿದ್ದೇನೆ. ಪೋಲಿಸರು ಬರೆದು ಅವುಗಳನ್ನು ವಶಪಡಿಸಿಕೊಂಡರು. ಪೋಲಿಸರು ಮಾಡಿದ ಬರವಣಿಗೆಗೆ ನನ್ನ ಸಹಿ ಪಡೆದಿಲ್ಲ. 1 ನೇ ಆರೋಪಿಯ ಮೋಟಾರ್ ಸೈಕಲ್ ಪ್ರಾಸಾ-4 ಇವರ ಮನೆಯಿಂದ 20 ಅಡಿ ದೂರದಲ್ಲಿ ನಿಲ್ಲಿಸಿದ್ದರು. ಮೋಟಾರ್ ಸೈಕಲ್ ನಿಂದ ಸುಮಾರು ಹತ್ತು ಅಡಿ ದೂರದಲ್ಲಿ ಮೊಬೈಲ್ ಇತ್ತು. ಗಲಾಟೆ ಆದ ದಿನ ಮಧ್ಯಾಹ್ನವೇ ಪೋಲಿಸರು ಅವುಗಳನ್ನು ತೆಗೆದುಕೊಂಡರು. ಆ ರೀತಿ ತೆಗೆದುಕೊಂಡ ಪೋಲಿಸ್ ಅಧಿಕಾರಿಯ ಹೆಸರು ಮತ್ತು ಪದನಾಮ ಗೊತ್ತಿಲ್ಲ. ಆ ರೀತಿ ಪೋಲಿಸರು ಅವುಗಳನ್ನು ತೆಗೆದುಕೊಳ್ಳುವಾಗ ಗಲಾಟೆ ಬಗ್ಗೆ ನಾನು ಅವರಿಗೆ ಹೇಳಿದ್ದೇನೆ. ಪೋಲಿಸರು ಅದನ್ನು ಬರೆದುಕೊಂಡರು. ನಂತರ ಪೋಲಿಸರು ಪುನಃ ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

17. ಘಟನೆಯ ದಿನ ನಾನು ಮತ್ತು ನನ್ನ ಹೆಂಡತಿ ಕೂಲಿ ಕೆಲಸಕ್ಕೆ ಹೋಗಿದ್ದೆವು, ಆದ್ದರಿಂದ ಊರಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಗಾಯಾಳುಗಳು ಮತ್ತು ಮೃತರು ನನ್ನ ರಕ್ತಸಂಬಂಧಿಗಳು ಎಂದರೆ ಸರಿ. 6 ನೇ ಆರೋಪಿ ಮತ್ತು ಅವರ ಕುಟುಂಬದವರು ನಮ್ಮ ಜಾತಿಯವರೆಂದರೆ ಸರಿಯಲ್ಲ. 4 ಮತ್ತು 5 ನೇ ಆರೋಪಿತರು ನಮ್ಮ ಜಾತಿಯವರೆಂದರೆ ಸರಿ. ಹೆಸರು ಓದಿ ಹೇಳಿದ 15 ರಿಂದ 19 ನೇ ಆರೋಪಿತರು ನಮ್ಮ ಜಾತಿಯರೆಂದರೆ ಸರಿಯಲ್ಲ. ಪಂಡಿತಪುರದ ಜನರೊಂದಿಗೆ ನನ್ನ ವ್ಯವಹಾರ ಇಲ್ಲ ಎಂದರೆ ಸರಿ. ಪಂಡಿತಪುರದ ಜನರು ನನಗೆ ಪರಿಚಯ ಇಲ್ಲ.

18. ಗಲಾಟೆಯಲ್ಲಿ 19 ಜನ ಬಂದಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ದೊಡ್ಡಚಿನ್ನಪ್ಪನಿಗೆ ಯಾರು ಹೊಡೆದರು ಎಂದು ನೀವು ನೋಡಿಲ್ಲ ಎಂದರೆ ಸಾಕ್ಷಿದಾರರು ಜ್ಞಾಪಕ ಇಲ್ಲ ಎನ್ನುತ್ತಾರೆ. ನನ್ನ ಚಿಕ್ಕಮಾವ ಎಂದರೆ ದೊಡ್ಡಚಿನ್ನಪ್ಪ. ದೇವರಾಜು ನನ್ನ ಬಾಮೈದುನ. ಆ ಚೂರಿಯನ್ನು ಬಂದಿದ್ದ ಮತ್ತೊಬ್ಬ ಹುಡುಗ ಎತ್ತಿಕೊಂಡು ನನ್ನ ಚಿಕ್ಕಮಾವನ (ದೊಡ್ಡಚಿನ್ನಪ್ಪ) ಹೊಟ್ಟೆಗೆ ಎಳೆದು ಮತ್ತು ಅದೇ ಚೂರಿಯಿಂದ ತಿವಿದ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ. ಬಿಡಿಸಿಕೊಳ್ಳಲು ಬಂದ ದೇವರಾಜನಿಗೆ ಬಂದಿದ್ದ ಆಸಾಮಿಗಳಲ್ಲಿ ಕೆಂಪಗಿದ್ದ ಒಬ್ಬ ಹುಡುಗ ಅವನ ಕೈಯಲ್ಲಿದ್ದ ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದರಿಂದ ದೇವರಾಜು ಕೆಳಕ್ಕೆ ಬಿದ್ದ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೀರಾ ಎಂದರೆ ಹೇಳಿದ್ದೇನೆ ಎನ್ನುತ್ತಾರೆ. ದೇವರಾಜ ಅಯ್ಯೋ ಅಯ್ಯೋ ಎಂದು ಒದ್ದಾಡುತ್ತಿದ್ದ, ಅವನ ಸಹಾಯಕ್ಕೆ ಬಂದ ಮುನಿಕೃಷ್ಣಪ್ಪನಿಗೆ ನಮ್ಮ ಚಿಕ್ಕಮಾವನಿಗೆ ತಿವಿದ ಹುಡುಗನೇ ಚೂರಿಯಿಂದ ತಿವಿದ ಹಾಗೂ ಸ್ವಲ್ಪ ವಯಸ್ಸಾಗಿರುವ ವ್ಯಕ್ತಿ ಅವನ ಕೈಯಲ್ಲಿದ್ದ ದೊಣ್ಣೆಯಿಂದ ಮುನಿಕೃಷ್ಣಪ್ಪನ ಹೊಟ್ಟೆ ಮತ್ತು ಬಲಗಾಲಿಗೆ ಹೊಡೆದ ಎಂದು ಪೋಲಿಸರಿಗೆ ಹೇಳಿಕೆ ನೀಡಿದ್ದೀರಾ ಎಂದರೆ ಹೇಳಿದ್ದೇನೆ ಎನ್ನುತ್ತಾರೆ.

19. ನನ್ನ ಮಾವ ದೊಡ್ಡಚಿನ್ನಪ್ಪ ಸ್ಥಳಕ್ಕೆ ಓಡಿಬಂದಿದ್ದರು ಮತ್ತು ಶಾಂತಕುಮಾರ ದೊಡ್ಡಚಿನ್ನಪ್ಪನ ಹೊಟ್ಟೆಗೆ ಲಾಂಗ್ ನಿಂದ ಚುಚ್ಚಿದರು; ಶಾಂತಕುಮಾರನ ತಮ್ಮ ವೆಂಕಟಪ್ಪ ಈತ ಚಿನ್ನಪ್ಪನ ಹೊಟ್ಟೆಗೆ ಲಾಂಗ್ ನಿಂದ ಚುಚ್ಚಿದರು ಹಾಗೂ ಮುನಿಕೃಷ್ಣಪ್ಪ ಮತ್ತು ಮುನಿರಾಜು ಬಂದರು ಮತ್ತು ಮುನಿಶಾಮಪ್ಪನ ಮಗ ಮುನಿರಾಜು ಮುನಿಕೃಷ್ಣಪ್ಪನಿಗೆ ಪಕ್ಕೆಗೆ ಚುಚ್ಚಿದರು ಎಂದು ಮುಖ್ಯ ವಿಚಾರಣೆಯ 6ನೇ ಪ್ಯಾರದಲ್ಲಿನ ವಿಷಯಗಳನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

20. 5ನೇ ಆರೋಪಿ ಮುನಿರಾಜು ಪ್ರಾಸಾ-2 ಮುನಿರಾಜಪ್ಪನಿಗೆ ಚೂರಿಯಲ್ಲಿ ಆತನ ಪಕ್ಕೆಗೆ ಚುಚ್ಚಿದರು ಎಂದು ಮುಖ್ಯ ವಿಚಾರಣೆಯ 7ನೇ ಪ್ಯಾರದಲ್ಲಿನ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

21. ಚಿನ್ನಪ್ಪ, ದೇವರಾಜ ಮತ್ತು ನಾನು, ನಾರಾಯಣಸ್ವಾಮಿರವರ ಬಳಿಗೆ ಹೋದೆವು ಮತ್ತು ಆತನನ್ನು ಒಂದು ರೂಮ್ ನಲ್ಲಿ ಹಾಕಿ ಬಾಗಿಲು ಹಾಕಿದ್ದೆವು ಎಂದು ಮುಖ್ಯ ವಿಚಾರಣೆಯ 4ನೇ ಪ್ಯಾರದಲ್ಲಿನ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. 5-6 ಜನ ದೊಣ್ಣೆಯಿಂದ ಗಾಯಿತ್ರಮ್ಮಳ ಕೈಗಳಿಗೆ ಹೊಡೆದಿದ್ದರು ಎಂದು ಮುಖ್ಯ ವಿಚಾರಣೆಯ 5ನೇ ಪ್ಯಾರದಲ್ಲಿನ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ. ಗಲಾಟೆಯಾಗುವಾಗ ಪ್ರಾಸಾ-4 ನಾರಾಯಣಸ್ವಾಮಿ ಅಲ್ಲಿ ಇರಲಿಲ್ಲ ಮತ್ತು ಆತ ಊರಿಗೆ ಬಂದೇ ಇರಲಿಲ್ಲ ಎಂದರೆ ಸರಿಯಲ್ಲ.

22. ನೀವು ಎಲ್ಲಿ ನಿಂತು ಘಟನೆಯನ್ನು ನೋಡಿದ್ದೀರಿ ಎಂದು ಪೋಲಿಸರಿಗೆ ನೀವು ನಿಂತ ಸ್ಥಳವನ್ನು ತೋರಿಸಿದ್ದೀರಾ ಎಂದರೆ ಸಾಕ್ಷಿದಾರರು ತೋರಿಸಿದ್ದೇನೆ ಎನ್ನುತ್ತಾರೆ. ಮೊಬೈಲ್ ಮತ್ತು ಮೋಟಾರ್ ಸೈಕಲ್ ಅನ್ನು ಪೋಲಿಸರು ತೆಗೆದುಕೊಂಡು ಹೋದ ದಿನವೇ ನಾನು ನಿಂತ ಸ್ಥಳವನ್ನು ತೋರಿಸಿದ್ದೇನೆ. ನಾನು ಘಟನೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1ರಿಂದ 4ರವರು ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 4, 15ರಿಂದ 19ನೇ ಆರೋಪಿತರ ಪರ ಶ್ರೀ ಟಿಎಸ್ ವಕೀಲರಿಂದಃ</u>**

23. 4ರಿಂದ 6ನೇ ಆರೋಪಿತರು ಮತ್ತು 15ರಿಂದ 19ನೇ ಆರೋಪಿತರು ನಮ್ಮ ಊರಿನವರು ಎಂದರೆ ಸರಿ. 6, 15 ಮತ್ತು 16ನೇ ಆರೋಪಿತರು ವೆಂಕಟೇಶಪ್ಪನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 6, 15 ಮತ್ತು 16ನೇ ಆರೋಪಿತರು ಒಂದೇ ಮನೆಯಲ್ಲಿ ವಾಸ ಮಾಡುತ್ತಾರಾ ಅಥವಾ ಬೇರೆ ಬೇರೆ ವಾಸ ಮಾಡುತ್ತಾರ ಎಂದರೆ ನನಗೆ ಗೊತ್ತಿಲ್ಲ. ಸದರಿ ಆರೋಪಿತರ ಮನೆಗಳು ಪ್ರಾಸಾ-4 ಇವರ ಮನೆಯಿಂದ ಎಷ್ಟು ದೂರದಲ್ಲಿವೆ ಎಂದು ನನಗೆ ಗೊತ್ತಿಲ್ಲ. ಘಟನೆಗೂ ಮೊದಲು 6, 15 ಮತ್ತು 16ನೇ ಆರೋಪಿತರನ್ನು ನಾನು ನೋಡಿದ್ದೇನೆ. ಘಟನೆಗೂ ಎಷ್ಟು ದಿನ ಮೊದಲು ನೋಡಿದ್ದೇನೆ ಎಂದು ಜ್ಞಾಪಕವಿಲ್ಲ. ಅವರನ್ನು ಊರಲ್ಲಿ ನೋಡಿದ್ದೇನೆ. 4ರಿಂದ 6, 15ರಿಂದ 19 ಈ ಆರೋಪಿತರ ಹೆಸರು ಘಟನೆಗೂ ಮೊದಲು ನನಗೆ

ಗೊತ್ತಿತ್ತು. ಪೋಲಿಸರ ಮುಂದೆ ಹೇಳಿಕೆ ನೀಡುವಾಗ ಅವರ ಹೆಸರುಗಳು ನನಗೆ ಜ್ಞಾಪಕವಿತ್ತು.

24. ನನ್ನ ಮಾವ ದೊಡ್ಡಚಿನ್ನಪ್ಪ ಸ್ಥಳಕ್ಕೆ ಓಡಿಬಂದಿದ್ದರು ಮತ್ತು ಶಾಂತಕುಮಾರ ದೊಡ್ಡಚಿನ್ನಪ್ಪನ ಹೊಟ್ಟೆಗೆ ಲಾಂಗ್ ನಿಂದ ಚುಚ್ಚಿದರು; ಶಾಂತಕುಮಾರನ ತಮ್ಮ ವೆಂಕಟಪ್ಪ ಈತ ಚಿನ್ನಪ್ಪನ ಹೊಟ್ಟೆಗೆ ಲಾಂಗ್ ನಿಂದ ಚುಚ್ಚಿದರು ಹಾಗೂ ಮುನಿಕೃಷ್ಣಪ್ಪ ಮತ್ತು ಮುನಿರಾಜು ಬಂದರು ಮತ್ತು ಮುನಿಶಾಮಪ್ಪನ ಮಗ ಮುನಿರಾಜು ಮುನಿಕೃಷ್ಣಪ್ಪನಿಗೆ ಪಕ್ಕೆಗೆ ಚುಚ್ಚಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾಗುವಾಗ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ಮತ್ತು 12 ನೇ ಆರೋಪಿತರ ಪರ ಶ್ರೀ ಎಂ ಆರ್ ಎನ್ ವಕೀಲರಿಂದಃ</u>**

25. ಆರೋಪಿತರನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಪ್ರಾಸಾ-4 ಇವರ ಇಟ್ಟಿಗೆ ವ್ಯವಹಾರ ನನ್ನ ಮುಂದೆ ಆಗಿಲ್ಲ. ಚಾಕು ಮತ್ತು ಚೂರಿ ಇವುಗಳ ಮಧ್ಯದ ವ್ಯತ್ಯಾಸ ನನಗೆ ಗೊತ್ತಿದೆ. ಚೂರಿ ಎರಡೂ ಕಡೆಗೆ ಹರಿತವಾಗಿರುತ್ತದೆ ಮತ್ತು ಚಾಕು ಒಂದು ಕಡೆ ಮಾತ್ರ ಹರಿತವಾಗಿರುತ್ತದೆ ಎಂದರೆ ಸರಿ. ಲಾಂಗ್ ಎಂದರೆ ಒಂದು ಮಾರಿನಷ್ಟು ಉದ್ದ ಇರುತ್ತದೆ. ಘಟನೆಯ ದಿನ 1 ನೇ ಆರೋಪಿ ಘಟನಾ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಘಟನೆಯ ದಿನ ಹೊಸೂರಿನ ಪೀಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಸಮಾಜದಲ್ಲಿ ಒಳ್ಳೆಯ ಹೆಸರಿದೆ ಎಂದರೆ ಸರಿ. 1 ನೇ ಆರೋಪಿ ಘಟನೆ ನಡೆಯುವಾಗ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆತ ಗಾಯಿತ್ರಮ್ಮಳಿಗೆ ಚಾಕುವಿನಿಂದಾಗಲೀ ಅಥವಾ ಚೂರಿಯಿಂದಾಗಲೀ ಅಥವಾ ಲಾಂಗ್ ನಿಂದಾಗಲೀ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಗಾಯಿತ್ರಮ್ಮ ನನ್ನ ತಂಗಿಯಾದ್ದರಿಂದ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u>** 2, 3, 7, 10, 11, 13 ಮತ್ತು 14ನೇ ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಮರುವಿಚಾರಣೆ : ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.